**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಆಳಂದ**

**ಸಿ.ಸಿ. ನಂ. 44/2019**

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ

ಪಿ.ಎಸ್.ಐ .ಆಳಂದ ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಪ್ರಭುಲಿಂಗ ತಂದೆ ಭೀಮರಾವ ಪಾಟೀಲ,

ವಯಸ್ಸುಃ 35 ವರ್ಷ, ಸಾಃ ಝಳಕಿ (ಕೆ) ತಾ. ಆಳಂದ.

**ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ**

**ಪ್ರಶ್ನೆ 1** ನ್ಯಾಯಾಲಯದ ಮುಂದೆ ಅಭಿಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ.

**ಪ್ರಶ್ನೆ 2.** ಸಿ.ಡಬ್ಲೂ. 1. ಪಿ.ಡಬ್ಲೂ. 1 ತಾನಾಜಿ ತಂದೆ ಯಾದವರಾವ ಅವರು ತಮ್ಮ ನುಡಿ ಸಾಕ್ಷಿಯಲ್ಲಿ 2018 ರಲ್ಲಿ ನನಗೆ ಚುನಾವಣಾ ಸ್ಕಾವಾಯಿಡ್ ಅಂತಾ ನೇಮಕ ಮಾಡಿದ್ದರು. ಜನರು ಯಾರು ನಮಗೆ ಹಣ ಹಂಚುತ್ತಿದ್ದಾರೆ ಅಂತಾ ತಿಳಿಸಿದ ಮೇರೆಗೆ ಅಲ್ಲಿ ಹೋಗಿ ನೋಡಿದಾಗ ಜನರು ಗುಂಪಾಗಿ ನಿಂತಿದ್ದರು. ಪೋಲಿಸರು ನಮಗೆ ಹಣ ಹಂಚುತ್ತಿದ್ದ ಬಗ್ಗೆ ನಮಗೆ ತಿಳಿಸಿದರು. ಸದರಿ ಮಾಹಿತಿ ಮೇರೆಗೆ ನಾನು ವರದಿ

ಸಲ್ಲಿಸಿರುತ್ತೇನೆ ಮತ್ತು ಹಣ ಹಂಚುವವರ ವಿರುದ್ದ ಸರಿಯಾದ ತನಿಖೆ ಮಾಡಬೇಕು ಅಂತಾ ಕೇಳಿಕೊಂಡಿರುತ್ತಾರೆ ಅಂತಾ ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ ಆರೋಪಿ.

ಪ್ರಶ್ನೇ 3 ಃ ಸಿ.ಡಬ್ಲೂ.6. ಪಿ. ಡಬ್ಲೂ. 6, ಮೌಲಾಪಾಟೀಲ ತಂದೆ ದಸ್ತಗೀರ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 07-05-2018 ರಂದು ವಿಧಾನ ಸಭಾ ಚುನಾವಣಾ ನಿಮಿತ್ಯ ನನ್ನನ್ನು ಚಾಸಾ 1, 4 ಮತ್ತು 5 ರವರನ್ನು ಫ್ಲೈಯಿಂಗ್ ಸ್ಕ್ವಾಯಿಡ್ ಅಂತಾ ನೇಮಕ ಮಾಡಿದ್ದರು. ದಿಃ 07-05-2018 ರಂದು ಚಾಸಾ 1 ರವರು ಚೆಕ್‌ಪೋಸ್ಟ ಹತ್ತಿರ ನೀತಿ ಸಂಹಿತೆ ಜಾರಿಯಲ್ಲಿ ಇದ್ದರಿಂದ ಬಿ.ಜೆ.ಪಿ ಕಾರ್ಯಕರ್ತೆಯರು 34 ವಾಹನಗಳನ್ನು ನಿಲ್ಲಿಸಿ ಪ್ರಚಾರ ಮಾಡಿದ್ದರಿಂದ ಬಾತ್ಮಿ ಬಂದ ಮೇರೆಗೆ ನಾನು, ಚಾಸಾ 1, 4 ಮತ್ತು 5 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿ ಮತ್ತು ವಾಹನಗಳು ಇದ್ದವು, ವಾಹನಕ್ಕೆ ಧ್ವಜ ಹಾಕಿದ್ದರು, ಚಾಸಾ 5 ರವರು ವಿಡಿಯೊ ಗ್ರಾಫಿ ಮಾಡಿಕೊಂಡು ನಂತರ ನಾವು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇವೆ. ಸಾಕ್ಷಿಯು ನ್ಯಾಯಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ.

**ಪ್ರಶ್ನೇ 4** ಃ ಸಿ.ಡಬ್ಲೂ.7. ಪಿ. ಡಬ್ಲೂ. 7, ಮೈಹಿಬೂಬ ಶೇಖ ಯುಸುಫ್‌ಸಾಬ ಅವರು ತಮ್ಮ ನುಡಿ ದಿಃ 15-05-2018 ರಂದು ಆರೋಪಿಯ ಪತ್ತೆಗಾಗಿ ಮಾದನ ಹಿಪ್ಪರಗಾ, ದರ್ಗಾ ಶಿರೂರ ಗ್ರಾಮದ ಪ್ರಮುಖರು ಮತ್ತು ಬಾತ್ಮಿದಾರರನ್ನು ಆರೋಪಿಯ ಬಗ್ಗೆ ವಿಚಾರಣೆ ಮಾಡಲಾಗಿ ನನಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ದಿಃ 20-07-2018 ರಂದು ಜಳಕಿ(ಕೆ) ಮತ್ತು ಕವಲಗಾ ಗ್ರಾಮಕ್ಕೆ ಹೋಗಿ ಈ ಪ್ರಕರಣದ ಆರೋಪಿಯ ಗ್ರಾಮದ ಪ್ರಮುಖರು ಮತ್ತು ಬಾತ್ಮಿದಾರರನ್ನು ವಿಚಾರಣೆ ಮಾಡಲಾಗಿ ನನಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. 15-08-2018 ರಂದು ಜಿಡಗಾ ಮತ್ತು ಜಮಗಾ

ಗ್ರಾಮಕ್ಕೆ ಹೋಗಿ ಈ ಪ್ರಕರಣದ ಆರೋಪಿಯ ಗ್ರಾಮದ ಪ್ರಮುಖರು ಮತ್ತು ಬಾತ್ಮಿದಾರರನ್ನು ವಿಚಾರಣೆ ಮಾಡಲಾಗಿ ನನಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ದಿಃ 16-10-2018 ರಂದು ಮೋಗಾ ಬಿ ಮತ್ತು ಇಕ್ಕಳಿಕಿ ಗ್ರಾಮಕ್ಕೆ ಹೋಗಿ ಈ ಪ್ರಕರಣದ ಆರೋಪಿಯ ಗ್ರಾಮದ ಪ್ರಮುಖರು ಮತ್ತು ಬಾತ್ಮಿದಾರರನ್ನು ವಿಚಾರಣೆ ಮಾಡಲಾಗಿ ನನಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ದಿಃ 05-12-2018 ರಂದು ಶಕಾಪೂರ ಮತ್ತು ಕೊಡಲಹಂಗರಗಾ ಗ್ರಾಮಕ್ಕೆ ಹೋಗಿ ಈ ಪ್ರಕರಣದ ಆರೋಪಿಯ ಗ್ರಾಮದ ಪ್ರಮುಖರು ಮತ್ತು ಬಾತ್ಮಿದಾರರನ್ನು ವಿಚಾರಣೆ ಮಾಡಲಾಗಿ ನನಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ, ಸದರಿ ವಿಷಯವಾಗಿ ನಾನು ಚಾಸಾ 9 ರವರಿಗೆ ವರದಿ ಸಲ್ಲಿಸಿರುತ್ತೇನೆ ಅಂತಾ ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ.

**ಪ್ರಶ್ನೆ 5-** ಸಿ.ಡಬ್ಲೂ.9, ಪಿ. ಡಬ್ಲೂ. 8 ಮಲ್ಲಿನಾಥ ತಂದೆ ಪ್ರಭು ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 08-05-2018 ರಂದು ಚಾಸಾ 8 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ದಿಃ 15-05-2018, 20-07-2018, 15-08-2018, 16-10-2018, 05-12-2018 ರಂದು ಚಾಸಾ 7 ರವರನ್ನು ಆರೋಪಿ ಪತ್ತೆಗಾಗಿ ನೇಮಕ ಮಾಡಿದ್ದು ಅವರು ನನಗೆ ವರದಿ ಸಲ್ಲಿರುತ್ತಾರೆ. ದಿಃ 25-12-2018 ರಂದು ನ್ಯಾಯಾಲಯಕ್ಕೆ ದೋ.ಪಟ್ಟಿಯನ್ನು ಸಲ್ಲಿಸಿರುತ್ತೇನೆ ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ.

ಪ್ರಶ್ನೆ 6- ನೀವು ಏನನ್ನಾದರೂ ಹೇಳ ಬಯಸುವೀರಾ?

ಉತ್ತರಃ ಆರೋಪಿ.

ಪ್ರಶ್ನೆ 7- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆರೋಪಿ.

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ನ್ಯಾಯಾಲಯ ಆಳಂದ.

ಸಿ.ಸಿ, ನಂಬರ 44 /2019 ಸಿ.ಡಬ್ಲೂ.6 ಪಿ.ಡಬ್ಲೂ.6

| | |
|---|---|
| ಹೆಸರು | ಮೌಲಾಪಟೇಲ |
| ತಂದೆ/ಗಂಡ | ದಸ್ತಗೀರ ಪಟೇಲ |
| ವಯಸ್ಸು | 64 ವರ್ಷ |
| ಉದ್ಯೋಗ | ನಿವೃತ್ತ ಮುಖ್ಯ ಪೇದೆ |
| ವಾಸಸ್ಥಳ | ಗುಳ್ಳೋಳ್ಳಿ |